ಆ) ಹಾಗಿದ್ದಲ್ಲಿ, ಎಷ್ಟು ಹಣ ನೀಡಲಾಗುವುದು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಈ ಯೋಜನೆಗೆ 2004–05ರಲ್ಲಿ ಸಾಲಿನಲ್ಲಿ ಅನುದಾನ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೈಗೊಂಡ ಕಾಮಗಾರಿಗಳು

196(11) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ವತಿಯಿಂದ ನಡೆದ ಕಾಮಗಾರಿಗಳಿಗೆ ಎಷ್ಟು ಮೊತ್ತದ ಬಿಲ್ಲುಗಳು ಹಣ ಪಾವತಿಗಾಗಿ ಬಾಕಿ ಇದೆ. ಯಾವಾಗ ಹಣ ಪಾವತಿ ಮಾಡಲಾಗುವುದು.

ಆ) ಕಳೆದ ಮೂರು ವರ್ಷಗಳಲ್ಲಿ ಮಂಡಳಿಯ ಕಾಮಗಾರಿಗಳಿಗೆ ನಿಗದಿಪಡಿಸಿದ ಮೊತ್ತ ಹಾಗೂ ಬಿಡುಗಡೆಯಾದ ಹಣ ಎಷ್ಟು;

ಇ) ಮಂಡಳಿಯ ವ್ಯಾಪ್ತಿಯಲ್ಲಿ ಎಷ್ಟು ವಿಧಾನಸಭಾ ಕ್ಷೇತ್ರಗಳು ಒಳಗೊಂಡಿರುತ್ತದೆ.

ಶ್ರೀ ಸಿದ್ಧರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) 1655 ಲಕ್ಷ ರೂಗಳು ಬಾಕಿ ಇದೆ. ಸಂಪನ್ಮೂಲಗಳನ್ನಾಧರಿಸಿ, ಹಣ ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಆ)

ವರ್ಷ	ನಿಗದಿಪಡಿಸಿದ ಮೊತ್ತ	ಲಕ್ಷ ರೂಗಳಲ್ಲಿ ಬಿಡುಗಡೆಯಾದ ಮೊತ್ತ
2001–02	3000	1135
2002–03	2350	1533
2003–04	1250	1350

ಇ) 71 ವಿಧಾನಸಭಾ ಕ್ಷೇತ್ರಗಳು

ಉಡುಪಿ ಜಿಲ್ಲೆಯಲ್ಲಿ ಗೇರು ತೋಟಗಳನ್ನು ರೈತರಿಗೆ ಗುತ್ತಿಗೆ ಮೇಲೆ ನೀಡಿರುವುದು

199(377) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಎಷ್ಟು ವಿಸ್ತೀರ್ಣದ ಗೇರು ತೋಟಗಳನ್ನು ಎಷ್ಟು ರೈತರಿಗೆ ಲೀಸ್ ಆಧಾರದ ಮೇಲೆ ನೀಡಲಾಗಿದೆ;

ಆ) ಜಮೀನು ಲೀಸಿಗೆ ಕೊಡುವಾಗ ವಿಧಿಸಿದ ಷರತ್ತುಗಳೇನು;

ಇ) ಕೊಡಲಾದ ಲೀಸ್‌ಗಳಲ್ಲಿ, ಲೀಸ್ ಅವಧಿ ಮುಗಿದ ಪ್ರಕರಣಗಳೆಷ್ಟು;

ಈ) ಲೀಸ್ ಮುಗಿದ ಪ್ರಕರಣಗಳಲ್ಲಿ ವಿಧಿಸಲಾದ ಷರತ್ತುಗಳನ್ನು ಪೂರೈಸಿದ ರೈತರ ಸಂಖ್ಯೆ ಎಷ್ಟು;

ಉ) ಲೀಸ್ ಪೂರೈಸಿದ ಮೇಲೆ ಸದರಿ ರೈತರಿಗೆ ಜಮೀನು ಮಂಜೂರು ಮಾಡಲಾಗಿದೆಯೇ;

ಊ) ಮಾಡದೇ ಇದ್ದಲ್ಲಿ ಅದಕ್ಕೆ ಕಾರಣವೇನು;